ಜನತಾ ಶಿಕ್ಷಣ ಟ್ರಸ್ಟ್ (ರಿ.), ಮಂಡ್ಯ.

# ಪಿ.ಇ.ಎಸ್. ವಿಜ್ಞಾನ, ಕಲಾ & ವಾಣಿಜ್ಯ ಕಾಲೇಜು

## ಎಂ.ಸಿ.ರಸ್ತೆ, ಮಂಡ್ಯ - 571 401.

ಮಂಡ್ಯ ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದಿದೆ. ನ್ಯಾಕ್ ಸಂಸ್ಥೆಯಿಂದ "ಎ" ಶ್ರೇಣಿ ಪಡೆದಿದೆ.



ಶ್ರೀ ಕೆ.ಎಸ್.ವಿಜಯ್ ಆನಂದ್
ಅಧ್ಯಕ್ಷರು



## ನಿತ್ಯ ಸಚಿವ ಶ್ರೀ ಕೆ.ವಿ.ಶಂಕರಗೌಡರು



ಕಾರ್ಯಕ್ರಮವೊಂದರಲ್ಲಿ ಶ್ರೀ ಕೆಂಗಲ್ ಹನುಮಂತಯ್ಯ,
ಶ್ರೀ ಡಿ.ವಿ.ಜಿ ಅವರೊಂದಿಗೆ ಶ್ರೀ ಕೆ.ವಿ.ಶಂಕರಗೌಡರು



ಶ್ರೀ ಕಾಮರಾಜ್ ನಾಡಾರ್, ಶ್ರೀ ಗುಲ್ಜಾರಿಲಾಲ್ ನಂದ
ಅವರೊಂದಿಗೆ ಶ್ರೀ ಕೆ.ವಿ.ಶಂಕರಗೌಡರು



ಖ್ಯಾತ ಸಾಹಿತಿಗಳೊಂದಿಗೆ ಶ್ರೀ ಕೆ.ವಿ.ಶಂಕರಗೌಡರು,
ಡಾ.ಕೆ.ಶಿವರಾಮ ಕಾರಂತರು ಮತ್ತು ಪು.ತಿ.ನರಸಿಂಹಾಚಾರ್



ಶ್ರೀ ವೀರೇಂದ್ರ ಪಾಟೀಲ್, ಶ್ರೀ ರಾಮಕೃಷ್ಣ ಹೆಗಡೆ,
ಶ್ರೀ ದೇವರಾಜ ಅರಸು ಮತ್ತು ಶ್ರೀ ಕೆ.ವಿ.ಶಂಕರಗೌಡರು



ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ ಗಾಯಕಿ ಗಂಗೂಬಾಯಿ ಹಾನಗಲ್ ಅವರನ್ನು
ಅಭಿನಂದಿಸುತ್ತಿರುವ ಶ್ರೀ ವೀರೇಂದ್ರ ಪಾಟೀಲ್ ಹಾಗೂ ಶ್ರೀ ಕೆ.ವಿ.ಶಂಕರಗೌಡರು



ರಾಜ್ಯಪಾಲ ಶ್ರೀ ಜಿ.ಎಸ್.ಪಾಠಕ್, ಶ್ರೀ ವೀರೇಂದ್ರ ಪಾಟೀಲ್, ಶ್ರೀ ರಾಮಕೃಷ್ಣ ಹೆಗಡೆ,
ಶ್ರೀ ಬಿ.ರಾಚಯ್ಯ ಮತ್ತಿತರರೊಂದಿಗೆ ಶ್ರೀ ಕೆ.ವಿ.ಶಂಕರಗೌಡರು



ರಾಷ್ಟ್ರಕವಿ ಕುವೆಂಪು ಅವರ ಜೊತೆಯಲ್ಲಿ ಶ್ರೀ ಕೆ.ವಿ.ಶಂಕರಗೌಡರು ಮತ್ತು
ಶ್ರೀ ಎಸ್.ಸಿ.ಮಲ್ಲಯ್ಯ, ಡಾ. ದೇ.ಜವರೇಗೌಡ



ಪುತ್ರ ಕೆ.ಎಸ್.ಸಚ್ಚಿದಾನಂದರವರ ವಿವಾಹ ಸಂದರ್ಭದಲ್ಲಿ ಕೆ.ವಿ.ಶಂಕರಗೌಡರ ಕುಟುಂಬ



ಕರ್ನಾಟಕ ಸಾಹಿತ್ಯ ಅಕಾಡೆಮಿಯ ಕಾರ್ಯಕ್ರಮದಲ್ಲಿ ಶ್ರೀ ಕೆ.ವಿ.ಶಂಕರಗೌಡರು,
ನಾಡೋಜ ದೇ.ಜ.ಗೌ ಹಾಗೂ ಡಾ.ಕೆ.ಎಸ್.ನಿಸಾರ್ ಅಹಮದ್



ಕಾರ್ಯಕ್ರಮವೊಂದರಲ್ಲಿ ಎಂ.ಪಿ.ನಾಡಗೌಡ, ಕೆ.ವಿ.ಶಂಕರಗೌಡರು,
ಸಾಹಿತಿ ವಿ.ಕೃ.ಗೋಕಾಕ್ ಹಾಗೂ ಜಿ.ಎಸ್.ಬೊಮ್ಮೇಗೌಡರು



ವರನಟ ಡಾ.ರಾಜಕುಮಾರ ಅವರೊಡನೆ ಸಮಾಲೋಚನೆಯಲ್ಲಿ
ತೊಡಗಿರುವ ಶ್ರೀ ಕೆ.ವಿ.ಶಂಕರಗೌಡರು



ಸಿನಿಮಾ ಚಿತ್ರೀಕರಣ ಸಂದರ್ಭದಲ್ಲಿ ಶ್ರೀ ಡಿ.ದೇವರಾಜ ಅರಸು,
ಮಿನುಗುತಾರೆ ಕಲ್ಪನಾ ಮತ್ತಿತರರೊಂದಿಗೆ ಶ್ರೀ ಕೆ.ವಿ.ಶಂಕರಗೌಡರು

# ನಿತ್ಯ ಸಚಿವ ಕೆ.ವಿ.ಶಂಕರಗೌಡರು

ಬದುಕಿನಲ್ಲಿ ಸೇವೆ ಮಾಡುವುದು ಉತ್ತಮವೆನಿಸಿಕೊಂಡರೆ, ಸೇವೆಯನ್ನೇ ಬದುಕಾಗಿಸಿಕೊಂಡದ್ದು ಮಹತ್ತರವಾದುದ್ದು ಎಂಬುದನ್ನು ಸದಾ ಪರಿಪಾಲಿಸಿ ಬದುಕಿನುದ್ದಕ್ಕೂ ತಾನು ತನ್ನ ಕುಟುಂಬ ಎಂಬ ಸ್ವಾರ್ಥದಾಯಿಗಳಾಗದೆ ನಿರಂತರವಾಗಿ ಸಮಾಜ ಕಟ್ಟುವ ಸಮಾಜ ಸೇವೆಯಲ್ಲಿ ಬದುಕನ್ನು ಸವೆಸಿದ ನಿತ್ಯ ಸಚಿವ ಕೆ.ವಿ.ಶಂಕರಗೌಡರ ಸಮಾಜ ಮುಖಿ ಕಾರ್ಯಗಳು ಹಲವುಗಳಲ್ಲಿ ಕೆಲವು ನಿಮ್ಮ ಮುಂದಿವೆ.......

ಕೆ.ವಿ.ಶಂಕರಗೌಡರವರು ಸಹಕಾರಿ ಧುರೀಣರಾಗಿ, ಶಿಕ್ಷಣತಜ್ಞರಾಗಿ, ಹೋರಾಟಗಾರರಾಗಿ, ಕಲಾವಿದರಾಗಿ, ಬರಹಗಾರರಾಗಿ, ಭಾಷಣಗಾರರಾಗಿ, ಪತ್ರಕರ್ತರಾಗಿ, ಹೃದಯವಂತ ರಾಜಕಾರಣಿಯಾಗಿ ಮತ್ತು ಮಾನವತಾವಾದಿಯಾಗಿದ್ದರಿಂದ ಇವರನ್ನು ರಾಷ್ಟ್ರಕವಿ ಕುವೆಂಪುರವರು 'ನಿತ್ಯಸಚಿವ' ಎಂಬ ಬಿರುದು ನೀಡಿ ಗೌರವಿಸಿದ್ದಾರೆ.

ಯುವ ವಯಸ್ಸಿನಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡು ಅನೇಕ ಬಾರಿ ಸೆರೆವಾಸವನ್ನು ಅನುಭವಿಸಿದರು ಹಾಗೂ ನಾಡು ನುಡಿ ವಿಚಾರಗಳಿಗಾಗಿ ಹಲವಾರು ಹೋರಾಟಗಳಲ್ಲಿ ಭಾಗಿಯಾದದ್ದು ಮಾತ್ರವಲ್ಲ, ಡಾ|| ರಾಜಕುಮಾರ ಅಂತಹ ಮೇರು ವ್ಯಕ್ತಿತ್ವಗಳನ್ನು ಹೋರಾಟಕ್ಕಿಳಿಸಿದ ಕೀರ್ತಿ ಇವರದ್ದು.

ಶ್ರೀಯುತರು ಶಿಕ್ಷಣ ಸಚಿವರಾಗಿದ್ದ ಸಂದರ್ಭದಲ್ಲಿ ಹಲವಾರು ಕ್ರಾಂತಿಕಾರಕ ಬದಲಾವಣೆಗಳನ್ನು ತಂದು ಇತರೆ ರಾಜ್ಯಗಳಿಗೂ ಮಾದರಿಯಾಗುವ ಮೂಲಕ ನಾಡಿನ ಶಿಕ್ಷಣ ಬೇರುಗಳನ್ನು ಗಟ್ಟಿಗೊಳಿಸಿದ್ದಾರೆ. ಇದಕ್ಕೆ ಸಾಕ್ಷಿಯಾಗಿ ಚೆಕ್ ಮೂಲಕ ಸಂಬಳ ವಿನಿಯೋಗ, ಕೊಠಾರಿ ಆಯೋಗದ ಶಿಫಾರಿಸ್ಸಿನ ಅನುಷ್ಠಾನ, ಕನ್ನಡ ವಿಶ್ವಕೋಶ ರಚನೆ, ನಾಡಿನಾದ್ಯಂತ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಪ್ರಾರಂಭ, ಪಠ್ಯಪುಸ್ತಕ ಇಲಾಖೆಯನ್ನು ಅಸ್ಥಿತ್ವಕ್ಕೆ ತಂದದ್ದು, ಇತ್ಯಾದಿ ಶ್ಲಾಘನೀಯ ಕಾರ್ಯಗಳನ್ನು ಮಾಡಿದ್ದಾರೆ.

ಪತ್ರಿಕೋದ್ಯಮದಲ್ಲಿ 'ಜನಮನ' ಎನ್ನುವ ವಾರಪತ್ರಿಕೆಯನ್ನು ಪ್ರಾರಂಭಿಸಿ ಸಮಾಜವನ್ನು ಕಟ್ಟುವ ಬೌದ್ಧಿಕ ಚಿಂತನ-ಮಂಥನಕ್ಕೆ ಅವಕಾಶ ಕಲ್ಪಿಸಿದರು.

ಶ್ರಮಿಕ ರೈತರ ನೋವು ಸಂಕಷ್ಟಗಳನ್ನು ತೀರ ಹತ್ತಿರದಿಂದ ಗಮನಿಸಿದ ಇವರು ರೈತರಿಗೆ ಜಪಾನ್‌ನಿಂದ ಪವರ್ ಟಿಲ್ಲರ್‌ಗಳನ್ನು ತರಿಸಿಕೊಟ್ಟರು ಮತ್ತು ರೈತರ ಕಂದಾಯವನ್ನು ಮನ್ನಾ ಮಾಡಿದರು. ರೈತರಿಗೆ ದಲ್ಲಾಳಿಗಳು ಮತ್ತು ಇತರರಿಂದ ಆಗುತ್ತಿದ್ದ ಮೋಸ, ಅನ್ಯಾಯಗಳ ವಿರುದ್ಧ ಸಿಡಿದೆದ್ದ ಗೌಡರು ರೈತರ ವಿವಿದ್ದೋದ್ದೇಶ ಸಹಕಾರ ಸಂಘವನ್ನು ಅಸ್ಥಿತ್ವಕ್ಕೆ ತರುವ ಮೂಲಕ ರೈತರಿಗೆ ಬೇಕಾದ ಅಗತ್ಯ ವಸ್ತುಗಳನ್ನು ಸುಲಭ ಮತ್ತು ನ್ಯಾಯ ಬೆಲೆಗೆ ದೊರೆಕುವಂತೆ ಮಾಡಿದರು. ಇದು 'ಇಡೀ ಏಷ್ಯಾದಲ್ಲಿಯೇ ಅತ್ಯುತ್ತಮ ಸಹಕಾರ ಸಂಸ್ಥೆ' ಎಂಬ ಹೆಗ್ಗಳಿಕೆ ಪಡೆಯಿತು. ಕರ್ನಾಟಕದಲ್ಲಿ ಪ್ರಪ್ರಥಮ ಬಾರಿಗೆ ರೈತರ ಹೆಸರಿನಲ್ಲಿ ರೈತ ಸಭಾಂಗಣವನ್ನು ಮಂಡ್ಯ ನಗರದಲ್ಲಿ ಸ್ಥಾಪಿಸಿದರು, ರೈತರಿಗೆ ಅತ್ಯಂತ ಕಡಿಮೆ ಬಡ್ಡಿದರದಲ್ಲಿ ಸಾಲ ಸೌಲಭ್ಯ ಒದಗಿಸಲು ಡಿ.ಸಿ.ಸಿ. ಬ್ಯಾಂಕ್ ಸ್ಥಾಪಿಸಿದರು.

ಬಡವರ, ರೈತರ ಮತ್ತು ಜನಸಾಮಾನ್ಯರ ಮಕ್ಕಳಿಗೆ ಕಡಿಮೆ ಖರ್ಚಿನಲ್ಲಿ ಗುಣಮಟ್ಟದ ಶಿಕ್ಷಣ ನೀಡುವ ಉದ್ದೇಶದಿಂದ ಹಲವು ನಾಟಕಗಳನ್ನು ಹಳ್ಳಿಗಳಲ್ಲಿ ಗೌಡರ ನೇತೃತ್ವದಲ್ಲಿ ಪ್ರದರ್ಶನ ಮಾಡಿ ಪ್ರದರ್ಶನಗಳಿಂದ ಬಂದ ಹಣದಿಂದಲೇ ಪಿ.ಇ.ಎಸ್. ಶಿಕ್ಷಣ ಸಂಸ್ಥೆ ಕಟ್ಟಿ ವಿದ್ಯಾರ್ಥಿಗಳಿಗೆ ಅಕ್ಷರ ದಾಸೋಹವನ್ನು ಉಣಬಡಿಸಿದರು.

'ಗೆಳೆಯರ ಬಳಗ' ಮತ್ತು 'ಲೋಕ ಸೇವಕ ಕಲಾಬಳಗ' ಮತ್ತಿತರ ನಾಟಕ ತಂಡಗಳನ್ನು ಸ್ಥಾಪಿಸಿ ಮತ್ತು ಪೋಷಿಸಿ ಶ್ರೀ ಮಂಡ್ಯ ರಮೇಶ್ ಮತ್ತು ದಿ|| ಎಲ್.ಎನ್. ಶಾಸ್ತ್ರಿರವರಂತಹ ಮೇರು ಪ್ರತಿಭೆಗಳನ್ನು ಪರಿಚಯಿಸಿದ್ದರ ಜೊತೆಗೆ ಕಲಾವಿದರಿಗೆ ಮಾಶಾಸನ ಸಿಗುವಂತೆ ಮಾಡಿದರು. ಹಾಗೆಯೇ ವಿದ್ಯಾರ್ಥಿಗಳಲ್ಲಿರುವ ಪ್ರತಿಭೆಯನ್ನು ಪೋಷಿಸಲು ಪಿ.ಇ.ಎಸ್. ಕಾಲೇಜಿನಲ್ಲಿ ಸ್ವಾಮಿ ವಿವೇಕಾನಂದ ರಂಗಮಂದಿರವನ್ನು ಕಟ್ಟಿಸಿದರು. ಇವರು ರಾಜ್ಯಮಟ್ಟದ ಭಾವಗೀತೆ ಸ್ಪರ್ಧೆ, ನೃತ್ಯ ಸ್ಪರ್ಧೆ, ಕರ್ನಾಟಕದ ವಿವಿಧ ಜಾನಪದ ಕಲಾ ಪ್ರಕಾರಗಳನ್ನು ಆಯೋಜಿಸುವ ಮೂಲಕ ರಾಜ್ಯದ ಹಲವು ಕಲಾವಿದರನ್ನು ಪೋಷಿಸಿದ್ದಾರೆ.

'ಪಾದುಕ ಕಿರೀಟ', 'ಕೂಡಿಬಾಳೋಣ', 'ಅಪರಂಜಿ', 'ದನಿ' ಮತ್ತು ಇತರೆ ಕೃತಿಗಳನ್ನು ರಚಿಸಿದರು ಹಾಗೂ ಎರಡು ಸಿನಿಮಾಗಳನ್ನು ನಿರ್ಮಿಸಿದರು. ಜೊತೆಗೆ ಬೆಂಗಳೂರಿನಲ್ಲಿ ಕಂಠೀರವ ಸ್ಟುಡಿಯೋ ನಿರ್ಮಾಣದಲ್ಲಿ ಮಹತ್ವದ ಶ್ರಮವಹಿಸುವ ಮೂಲಕ ಸಾಹಿತ್ಯ ಮತ್ತು ಸಿನಿಮಾ ಕ್ಷೇತ್ರಗಳಲ್ಲಿ ದುಡಿದರು. ಶ್ರೀ. ಕೆ.ವಿ.ಶಂಕರಗೌಡರು ಜೀವನದುದ್ದಕ್ಕೂ ನಿಸ್ವಾರ್ಥ ಸೇವೆಯನ್ನು ಸಲ್ಲಿಸಿ, ಆರ್ಥಿಕವಾಗಿ ಅಶಕ್ತರಾಗಿದ್ದ ಜನರ ಕೈಗಳಿಗೆ ದುಡಿಯುವ ಅವಕಾಶ ಕಲ್ಪಿಸುವ ದೃಷ್ಠಿಯಿಂದ, ತಮ್ಮ ಸ್ವಂತ ಮನೆಯನ್ನೇ ಬ್ಯಾಂಕಿನಲ್ಲಿ ಒತ್ತೆ ಇಟ್ಟು, ಸಾಲ ಪಡೆದು ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಸ್ಥಾಪಿಸಿದರು.

ಗೌಡರು ಹಳ್ಳಿಗಳಿಗೆ ತಂತ್ರಜ್ಞಾನ ಕಲ್ಪಿಸುವ ಸದುದ್ದೇಶದಿಂದ Centre of Technology Transfer for Rural Development ಎಂಬ ಸಂಸ್ಥೆಯನ್ನು ಸ್ಥಾಪಿಸಲು ತಮ್ಮ ಸ್ವಂತದ್ದಾದ ಒಂದು ಎಕರೆ ಜಮೀನು ನೀಡುವುದರ ಜೊತೆಗೆ, 50 ಸಾವಿರ ರೂ.ಗಳನ್ನು ಅಂದೇ ದಾನವಾಗಿ ನೀಡಿದರು ಮತ್ತು ಇಷ್ಟೆಲ್ಲಾ ಸಾಮಾಜಿಕ ಮತ್ತು ರಾಜಕೀಯ ಇತಿಹಾಸ ಇದ್ದರೂ ಗೌಡರು ಸಾಲಗಾರನಾಗಿಯೇ ಕೊನೆಯುಸಿರೆಳೆದರು.

ಆದರೆ ಶ್ರೀಯುತರು ತಮ್ಮ ಅತ್ಯುತ್ತಮ ಅದರ್ಶಗಳನ್ನೇ ನಿಜವಾದ ಆಸ್ತಿ ಎಂದು ತಿಳಿದು, ತಮ್ಮ ತತ್ವ ಆದರ್ಶಗಳನ್ನು ತಮ್ಮ ಮಕ್ಕಳು ಮತ್ತು ಮೊಮ್ಮಕ್ಕಳಲ್ಲಿ ಬಿತ್ತಿದ್ದಾರೆ. ಇವರ ಆಶಯದಂತೆ ಶ್ರೀಯುತರ ಮೊಮ್ಮಗರಾದ ಶ್ರೀ ಕೆ.ಎಸ್.ವಿಜಯ್ ಆನಂದ್‌ರವರು ಪಿ.ಇ.ಎಸ್. ಟ್ರಸ್ಟನ್ನು ಮುನ್ನಡೆಸುತ್ತಿದ್ದಾರೆ.